**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.437/2022

**PW**. 2

**CW**. 2

**ಸಾಕ್ಷಿಯ ಹೆಸರು –ಪದ್ಮ**

**ಗಂಡನ ಹೆಸರು –ಪುಟ್ಟರಾಜೇಗೌಡ**

**ವಯಸ್ಸು –65 ವರ್ಷಗಳು**

ದಿನಾಂಕ 05–08–2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ಮನೆಕೆಲಸ**

**ವಾಸಸ್ಥಳ –ಹೊಸಅಗ್ರಹಾರ**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಚಾಸಾ–1 ನನ್ನ ಗಂಡ. ನನಗೆ ಇಬ್ಬರು ಹೆಣ್ಣು ಮಕ್ಕಳು ಹಾಗೂ ಮೃತ ಗೋಪಿಕೃಷ್ಣ ನನ್ನ ಮಗ. 1 ನೇ ಆರೋಪಿ ನನ್ನ ಸೊಸೆ. 2 ರಿಂದ 4 ನೇ ಆರೋಪಿತರು ನಮ್ಮ ಬಿಗರು. ನನ್ನ ಮಗ ಮದುವೆ ಸಮಯದಲ್ಲಿ ರೈಲ್ವೆ ಇಲಾಖೆಯಲ್ಲಿ ರೈಲ್ವೆ ಪೊಲೀಸ್ ಆಗಿ ಕೆಲಸ ಮಾಡುತ್ತಿದ್ದ. ಆರೋಪಿತರು ಕಿರುಕುಳ ನೀಡಿದ್ದರಿಂದ ಮತ್ತು 1 ನೇ ಆರೋಪಿಯು ಆತನ ಜೊತೆ ಹೊಂದಾಣಿಕೆ ಮಾಡಿಕೊಳ್ಳದಿದ್ದ ಕಾರಣ ನನ್ನ ಮಗ ಆತ್ಮಹತ್ಯೆ ಮಾಡಿಕೊಂಡು ಮೃತಪಟ್ಟಿದ್ದಾನೆ. ಮೊದಲು ನನ್ನ ಮಗ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದು ,1 ನೇ ಆರೋಪಿಯು ಆತನ ಜೊತೆ ವಾಸ ಮಾಡಲು ಬೆಂಗಳೂರಿಗೆ ಹೋಗಿಲ್ಲ. ನನ್ನ ಮಗ ಮದುವೆಯಾದ ಎರಡು ತಿಂಗಳ ನಂತರ ಮಂಡ್ಯಕ್ಕೆ ವರ್ಗಾವಣೆ ಮಾಡಿಕೊಂಡು ಅಲ್ಲಿ ಮನೆ ಮಾಡಿದ್ದ. 15 ದಿನಗಳಿಗೊಮ್ಮೆ ನನ್ನ ಮಗ ಮನೆಗೆ ಬಂದಾಗ, 1 ನೇ ಆರೋಪಿ ಹೊಂದಾಣಿಕೆ ಮಾಡಿಕೊಳ್ಳದಿರುವ ವಿಚಾರಗಳನ್ನು ನಮಗೆ ಹೇಳುತ್ತಿದ್ದ. ಆ ಬಗ್ಗೆ 1 ನೇ ಆರೋಪಿ ದೊಡ್ಡಪ್ಪ ಹುನುಮಂತೆಗೌಡನಿಗೆ ಹೇಳಿ ಪಂಚಾಯಿತಿ

ಮಾಡಿಸಿದ್ದರು. ಈಗ್ಗೆ ಮೂರುವರೆ ವರ್ಷಗಳ ಹಿಂದೆ ನನ್ನ ಮಗ ಜಮೀನಿನಲ್ಲಿ ನೇಣು ಬೀಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಚಾಸಾ–5 ರವರು ಹೇಳಿದ್ದರಿಂದ ನನಗೆ ವಿಚಾರ ಗೊತ್ತಾಯಿತು. 1 ನೇ ಆರೋಪಿಯು ನನ್ನ ಮಗನೊಂದಿಗೆ ಮದುವೆಯಾದ ನಂತರ ಕೇವಲ 3 ದಿನ ಮಾತ್ರ ಗಂಡನ ಮನೆಯಲ್ಲಿ ಇದ್ದಳು. ನನ್ನ ಮಗ ತೀರಿಕೊಂಡ ನಂತರ 1 ನೇ ಆರೋಪಿಯು ನಮ್ಮ ಮನೆಗೆ ಬಂದಿಲ್ಲ ಹಾಗೂ ನನ್ನ ಮಗನ ಶವ ಸಂಸ್ಕಾರಕ್ಕೆ ಬಂದಿಲ್ಲ. ನನ್ನ ಮಗ ತೀರಿಕೊಂಡ ನಂತರ 1 ನೇ ಆರೋಪಿಯು ಬೇರೆ ಮದುವೆ ಮಾಡಿಕೊಂಡಿದ್ದಾಳೆ.

**ಪಾಟೀಸವಾಲುಃ– ಆರೋಪಿ ಪರ ಶ್ರೀ ಈ ಬಿ ಆರ್ ವಕೀಲರಿಂದಃ–**

ನನ್ನ ಮಗನ ಮದುವೆ 1 ನೇ ಆರೋಪಿಯೊಂದಿಗೆ ದಿಃ 11–04–2018 ರಂದು ಆಗಿರುತ್ತದೆ ಎಂದರೆ ಸರಿ. ಅವರಿಬ್ಬರ ಮದುವೆಯಾದ ನಂತರ 1 ನೇ ಆರೋಪಿಯನ್ನು ನಮ್ಮ ಮನೆಯಿಂದ ಅವರ ತವರು ಮನೆಗೆ ಕರೆಸಿ ಕಳುಹಿಸಿ ಮಾಡಿದ್ದೇವೆ ಎಂದರೆ ಸರಿ. 1 ನೇ ಆರೋಪಿಯು ನನ್ನ ಮಗನ ಜೊತೆ ಅನ್ಯೋನ್ಯವಾಗಿ ಇಲ್ಲದ ಬಗ್ಗೆ ಅವರ ದೊಡ್ಡಪ್ಪ ಹುನುಮಂತೆಗೌಡ ರಾಜಿ ಪಂಚಾಯಿತಿ ಮಾಡಿದ ವಿಚಾರವನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳಿದ್ದೇನೆ ಎಂದರೆ ಸರಿ. ನನ್ನ ಮಗ ತನ್ನ ಇಚ್ಛೆಯಂತೆ ಮಂಡ್ಯದಲ್ಲಿ ಮನೆ ಮಾಡಿದ್ದ ಎಂದರೆ ಸರಿ. ಮಂಡ್ಯದಲ್ಲಿ ಮನೆ ಮಾಡಿದ ನಂತರ ನನ್ನ ಮಗ ಹಾಗೂ 1 ನೇ ಆರೋಪಿ ಅನ್ಯೋನ್ಯವಾಗಿ ಜೀವನ ಮಾಡುತ್ತಿದ್ದರು ಎಂದರೆ ಸರಿ. 2018 ನೇ ಸಾಲಿನ ಆಷಾಢ ಮಾಸದಲ್ಲಿ 1 ನೇ ಆರೋಪಿ ತನ್ನ ತವರು ಮನೆಯಲ್ಲಿ ಇದ್ದಳು ಎಂದರೆ ಸರಿ. ಹಬ್ಬಗಳ ದಿನಗಳ ಬಿಟ್ಟು 1 ನೇ ಆರೋಪಿಯು ನಮ್ಮ ಮನೆಯಲ್ಲಿ ವಾಸ ಮಾಡುತ್ತಿದ್ದಳು ಎಂದರೆ ಸರಿಯಲ್ಲ. ನನ್ನ ಮಗ ಆತ್ಮಹತ್ಯೆ ಮಾಡಿಕೊಳ್ಳುವ ದಿನ ಚಾಸಾ–5 ರವರೊಂದಿಗೆ ದೂರವಾಣಿಯಲ್ಲಿ ಮಾತನಾಡಿದ್ದ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ–5 ರವರ ತಾಯಿ ಆ ಬಗ್ಗೆ ನನಗೆ ಯಾವುದೇ

ವಿಚಾರ ತಿಳಿಸಿಲ್ಲ ಎಂದರೆ ಸರಿಯಲ್ಲ. ಲಕ್ಷ್ಮಮ್ಮ ನಮಗೆ ಯಾವುದೇ ಮಾಹಿತಿ ನೀಡಿಲ್ಲದಿದ್ದರೂ ಕೂಡ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನ ಅಂತ್ಯಕ್ರಿಯೆಗೆ ಆರೋಪಿತರು ಬಂದಿದ್ದರು ಎಂದರೆ ಸರಿಯಲ್ಲ. ನನ್ನ ಮಗನ ಡೆತ್ ಬೆನೆಫಿಟ್ ಗಳು 1 ನೇ ಆರೋಪಿಗೆ ಸಿಗಬಾರದೆಂದು ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋೀಪಿಯು ಮರು ಮದುವೆ ಮಾಡಿಕೊಂಡಿದ್ದಾಳೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.